

## ಎನ್.ಎಸ್. ಚಿದಂಬರ ರಾವ್

**(1936–2001)**

ಕನ್ನಡ ಪತ್ರಿಕೆಗಳಿಗೆ ಸರಳ, ಭಾವನಾತ್ಮಕ ಕತೆಗಳನ್ನು ಬರೆದು ಜನಪ್ರಿಯರಾದವರು ಎನ್.ಎಸ್. ಚಿದಂಬರ ರಾವ್. ಅವರು ಸುಮಾರು **500**ಕ್ಕೂ ಹೆಚ್ಚು ಕತೆಗಳನ್ನು ಬರೆದಿದ್ದಾರೆ. ಎರಡು–ಮೂರು ದಶಕಗಳ ಹಿಂದೆ ಚಿದಂಬರ ರಾವ್ ಅವರ ಕತೆಗಳನ್ನು ಪ್ರಕಟಿಸದ ಪತ್ರಿಕೆಗಳೇ ಇರಲಿಲ್ಲ. ಅವರ ಪೂರ್ತಿ ಹೆಸರು ನೂಲೇನೂರು ಶಂಕರಪ್ಪ ಚಿದಂಬರ ರಾವ್. ಅವರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ನುಲೇನೂರಿನವರು. ತಾಯಿ ಸೀತಮ್ಮ, ತಂದೆ ಎನ್. ಶಂಕರಪ್ಪ. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಇಡಿ. ಪದವಿ ಪಡೆದು ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯಲ್ಲಿ ಇಂಗ್ಲಿಷ್ ಭಾಷೆಯ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು.

ಕತೆ, ಕಾದಂಬರಿ, ಜೀವನ ಚರಿತ್ರೆ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. 'ಸರಿಯುವ ತೆರೆಗಳು', 'ಸಂದಿಗ್ಧ', 'ಶರನ್ನವರಾತ್ರಿ', 'ಸಿಗ್ನಲ್ ಬೀಳಲಿಲ್ಲ' ಅವರ ಕಥಾಸಂಕಲನಗಳಾಗಿವೆ. 'ಬೆಂಕಿಯ ನೆರಳು' ಅವರ ಕಾದಂಬರಿ.

ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಅವರ ಹಲವಾರು ಕಾರ್ಯಕ್ರಮಗಳು ಪ್ರಸಾರವಾಗಿವೆ. ಅವರು ನಟರಾಗಿಯೂ ಗುರುತಿಸಿಕೊಂಡಿದ್ದರು. ಕವಿ ಕುಮಾರವ್ಯಾಸ, ಕಾದಂಬರಿಕಾರ ಶಿವರಾಮ ಕಾರಂತ ಎಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಕಂಠ ಮಾಧುರ್ಯ ಅವರನ್ನು ವಿದ್ಯಾರ್ಥಿಗಳ ನೆಚ್ಚಿನ ಅಧ್ಯಾಪಕರನ್ನಾಗಿಸಿತ್ತು. ಅವರು ಬಹಳ ಸೊಗಸಾಗಿ ಗಮಕ ಹಾಡುತ್ತಿದ್ದರು. ಅವರನ್ನು ಪತ್ರಿಕೆಗಳಿಗೆ ಬರೆಯಲು ಪ್ರೇರೆಪಿಸಿದವರು ಸ್ನೇಹಿತ, ಕವಿ ಎಚ್.ಎಸ್. ವೆಂಕಟೇಶ ಮೂರ್ತಿ.

ಎಂದ. ತಕ್ಷಣ ಗಣೇಶಯ್ಯ ಒಂದೇ ಹಾರಿಕೆಗೆ ಸಿಂಗ್ ಅವರ ಒಳಕೋಣೆಯೊಳಕ್ಕೆ ನಡೆದುಬಿಟ್ಟ. ಅವನಿಗೂ ಸಿಂಗ್ ಅವರಿಗೂ ನಡೆಯುತ್ತಿರಬಹುದಾದ ಸಂಭಾಷಣೆಯನ್ನು ನಾನಾ ರೀತಿಯಲ್ಲಿ ನಾನು ಊಹಿಸತೊಡಗಿದೆ. ಪಾಪ! ಈ ಗಣೇಶಯ್ಯ ಮೊದಲೇ ನರಪೇಲ ನಾರಾಯಣ. ಮೈಯಲ್ಲಿ ಬೊಗಸೆ ರಕ್ತವಿಲ್ಲ. ಅಂಥದ್ದರಲ್ಲಿ ಎರಡೂ ಮೂರು ಬಾರಿ ರಕ್ತ ಕಾರಿಕೊಂಡಿದ್ದಾನೆ. ಇವನ ಭವಿಷ್ಯ ಏನಿದೆಯೋ?– ಎಂಥ ಘೋರ ರೋಗ ಇವನ ಶರೀರವನ್ನು ದಿನದಿನಕ್ಕೂ ಕೊರೆದುಹಾಕುತ್ತಿದೆಯೋ? ಇವನ ಹೆಂಡತಿ ಮಕ್ಕಳ ಪಾಡೇನು? ನಾನಾದರೂ ಗಟ್ಟಿ ಮುಟ್ಟಾಗಿದ್ದೆ– ಬರೀ ಎರಡುದಿನ ಸ್ವಲ್ಪ ಎದೆನೋವೆಂದು ಮಲಗಿದುದಕ್ಕೆ ನನ್ನ ಹೆಂಡತಿ ಗಾಬರಿಯಾಗಿ– 'ಬೇಗ ಹೋಗಿ ಸಿಂಗ್ ಡಾಕ್ಟರ್‌ಗೆ ತೋರಿಸಿಂದ್ರೆ...' ಆ ಎಂದು ವರಾತ ಹಾಕತೊಡಗಿದ್ದಳಲ್ಲ. ನಾನೂ ಇವನ ಜೊತೆಯಾಗಿ ಬಂದದ್ದಾಗಿತ್ತು. ಇಲ್ಲಿ ನೋಡಿದರೆ ಈ